**<u>ದಿನಾಂಕಃ 25.10.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು</u>**

**<u>ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ</u>**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದೆ ಎಂದು ಪ್ರಮಾಣೀಕರಿಸುತ್ತೇನೆ.

ಈ ಕೆಳಕಂಡ ದಾಖಲೆಯನ್ನು ಹಾಜರುಪಡಿಸುತ್ತಿದ್ದೇನೆ.

| | |
|---|---|
| ನಿ.ಪಿ.1 | ಪ್ರಥಮ ವರ್ತಮಾನ ವರದಿ |
| ನಿ.ಪಿ.2 | ದೂರು |
| ನಿ.ಪಿ.3 | ನಕ್ಷೆ |
| ನಿ.ಪಿ.4 | ಸ್ಥಳ ಮಹಜರ್ |
| ನಿ.ಪಿ.5 | ಐಎಂವಿ ವರದಿ |
| ನಿ.ಪಿ.6 | ಗಾಯದ ಪ್ರಮಾಣ ಪತ್ರ |
| ನಿ.ಪಿ.7 | ಅಂತಿಮ ವರದಿ |
| ನಿ.ಪಿ.8 ಮತ್ತು 9 | ಸಾಕ್ಷಿಯ ಆಧಾರ್ ಕಾರ್ಡಿನ ಹಾಗೂ ಡಿಎಲ್ ನ ಮೂಲ ಪ್ರತಿ ಪರಿಶೀಲಿಸಿದ ಬಳಿಕ ಅದು ಅವರಿಗೆ ಅವಶ್ಯಕತೆ ಇದೆ ಎಂದು ತಿಳಿಸಿದ ಕಾರಣ ಅದನ್ನು ಹಿಂದುಗಿರುಸಲಾಯಿತು ಅದರ ನೋಟರೈಜ್ ನಕಲು |
| ನಿ.ಪಿ.10 | ರೂ 29,498-00 ಚಿಕಿತ್ಸೆಗೆ ಖರ್ಚಾದ ಬಗ್ಗೆ 06 ಬಿಲ್ಲು ಹಾಗೂ 07 ವೈದ್ಯರ ಸಲಹಾ ಚೀಟಿಗಳು |
| ನಿ.ಪಿ.11 | ಒಂದು ಕ್ಷ ಕಿರಣ |

<u>ಪಾಟೀ ಸವಾಲು 1 ನೇ ಎದುರುದಾರರ ಪರ ವಕೀಲರಿಂದಃ</u>

1. ಅಪಘಾತವಾಯಿತು ಎಂದು ಹೇಳುವ ದಿನದಂದು ನಾನು ಪಣತ್ತೂರಿನಿಂದ ಎಲೆಕ್ಟ್ರಾನ್ ಸಿಟಿಯ ಕಡೆಗೆ ನನ್ನ ಕೆಲಸ ಮುಗಿಸಿಕೊಂಡು ಹೋಗುತ್ತಿದ್ದೇನು. ಅಪಘಾತವು ರಾತ್ರಿ 11.45 ರ ಸಮಯದಲ್ಲಿ ಅಗಿರುತ್ತದೆ. ಅಪಘಾತವು ಪಣತ್ತೂರು ಮುಖ್ಯ ರಸ್ತೆಯ ಗಿತಾಂಜಲಿ ಶಾಲೆಯ ಬಳಿ ಅಗಿರುತ್ತದೆ. ಅಪಘಾತ ಸ್ಥಳದಲ್ಲಿ ಡಿವೈಡರ್ ಇರಲಿಲ್ಲ ಅದರೆ 2 ವಾಹನ ಸಂಚರಿಸುವ ರಸ್ತೆಯಾಗಿತ್ತು. ಅದರ ಅಗಲ 60 ಅಡಿ ಇದೆ. ನಾನು ಅ ದಿನ 150 ಸಿಸಿಯ ಪಲ್ಸರ್ ದ್ವಿಚಕ್ರ ವಾಹನವನ್ನು ಒಡಿಸುತ್ತಿದ್ದೇನು. ಅಪಘಾತವಾದ ಸಮಯದಲ್ಲಿ ವಾಹನ ಸಂಚಾರ ಇರಲಿಲ್ಲ. ಸಾಮಾನ್ಯವಾಗಿ ವಾಹನ ಸಂಚಾರ ಕಡಿಮೆ ಇದ್ದಾಗ ವಾಹನಗಳು ವೇಗವಾಗಿ ಹೋಗುತ್ತದೆಂದರೆ ಸರಿ. ಅ ದಿನ ನಾನು 40 ಕಿಮೀ ವೇಗದಲ್ಲಿ ನನ್ನ ದ್ವಿಚಕ್ರ ವಾಹನವನ್ನು ಚಲಾಯಿಸುತ್ತಿದ್ದೇನು. ಅಪಘಾತದ ಸಮಯದಲ್ಲಿ ಕತ್ತಲು ಇತ್ತು. ನನಗೆ ಅಪಘಾತ ಪಡಿಸಿದ ವಾಹನ ವೇಗವಾಗಿ ಚಲಾಯಿಸುತ್ತಿದ್ದ ಕಾರಣ ನಾನು ಅದನ್ನು

ಗಮನಿಸಿರುವುದಿಲ್ಲ. ನಾನು ಒಡಿಸುತ್ತಿದ್ದ ದ್ವಿಚಕ್ರ ವಾಹನದ ಪಿಕ್ ಅಪ್ ಚೆನ್ನಾಗಿದೆ. ಅದರೆ ನಾನು ಅ ದಿನ ನಿದಾನವಾಗಿಯೇ ವಾಹನವನ್ನು ಚಲಾಯಿಸುತ್ತಿದ್ದೇನು.

2. ಕೆಎ 01 ಎಜಿ 2568 ರ ಕಾರು ನನ್ನ ವಾಹನದ ಬಲಬಾಗಕ್ಕೆ ಡಿಕ್ಕಿ ಮಾಡಿರುತ್ತದೆ. ಅಪಘಾತದಿಂದ ನನ್ನ ವಾಹನದ ಮುಂಬಾಗ ಸಂಪೂರ್ಣ ಜಖಂಗೊಂಡಿತ್ತು. ದ್ವಿಚಕ್ರ ವಾಹನ ನನ್ನ ಹೆಸರಿನಲ್ಲಿಯೇ ಇದೆ. ದ್ವಿಚಕ್ರ ವಾಹನದ ವಿಮೆ ಕಂಪನಿಯ ಹೆಸರು ನನಗೆ ನೆನಪು ಇಲ್ಲ. ಅದರೆ ವಿಮೆ ಮಾಡಿಸಿರುತ್ತೇನೆ. ನನ್ನ ದ್ವಿಚಕ್ರ ವಾಹನದ ಮುಂಬಾಗಕ್ಕೆ ಜಖಂ ಅದ ಕಾರಣ ನಾನೇ ಸ್ವತಃ ಹೋಗಿ ಕಾರಿಗೆ ಡಿಕ್ಕಿ ಮಾಡಿರುತ್ತೇನೆಂದರೆ ಸರಿಯಲ್ಲ. ಎದುರುದಾರರ ಕಾರು ನನ್ನ ದ್ವಿಚಕ್ರ ವಾಹನದ ಬಲಬಾಗಕ್ಕೆ ಡಿಕ್ಕಿ ಮಾಡಿರುತ್ತದೆಂದು ಹೇಳಿರುವುದು ಸುಳ್ಳಾಗಿದೆಯೆಂದರೆ ಸರಿಯಲ್ಲ.

3. ಅಪಘಾತವಾದ ಬಳಿಕ ನಾನು ಸಕ್ರಾ ವಲ್ಡ್ ಅಸ್ಪತ್ರೆಗೆ ದಾಖಲಾದೆನು. ಅಸ್ಪತ್ರೆಗೆ ಹೋದಾಗ ನನಗೆ ಪ್ರಜ್ಞೆ ಇರಲಿಲ್ಲ. ಅಪಘಾತದ ವಿವರವನ್ನು ನನ್ನ ಸ್ನೇಹಿತರು ವೈದ್ಯರಿಗೆ ತಿಳಿಸಿರುತ್ತಾರೆ. ನನ್ನ ಸ್ನೇಹಿತರು ಅಪಘಾತವಾದ ದಿನ ಇನ್ನೊಂದು ವಾಹನದಲ್ಲಿ ನನ್ನ ವಾಹನದ ಹಿಂದುಗಡೆ ಬರುತ್ತಿದ್ದರು. ಅವರಿಗೆ ಅಪಘಾತದ ಬಗ್ಗೆ ಗೊತ್ತಿತ್ತು. ಅಸ್ಪತ್ರೆಯಲ್ಲಿ ನೀಡಿದ ವಿವರದ ಎಂಎಲ್ ಸಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ. ನಾನು ಎಸಿಟಿ ಫೈಬರ್ ನೆಟ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನು. ಸದರಿ ಕಂಪನಿಯಲ್ಲಿ ನಾನು 5 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನು. ಈಗ ಸದರಿ ಕಂಪನಿಯಲ್ಲಿ ಕೆಲಸ ಮಾಡುತ್ತಿಲ್ಲ. ನಾನು 4 ತಿಂಗಳ ಕಾಲ ವೈದ್ಯಕೀಯ ರಜೆಯನ್ನು ಸದರಿ ಕಂಪನಿಯಿಂದ ಪಡೆದುಕೊಂಡೆನು. ನಾನು ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿ ನನಗೆ 60 ದಿನಗಳ ಇಎಲ್ ಇತ್ತು. ಸಿಕ್ ಲೀವ್ ಎಷ್ಟು ಇದೆ ನಾನು ಗಮನಿಸಿಲ್ಲ. ಗುತ್ತಿಗೆದಾರರ ಮೂಲಕ ನನಗೆ ಸದರಿ ಕಂಪನಿಯ ನೇಮಕ ಪತ್ರ ಬಂದಿತ್ತು.

4. ನಾನು ವೈದ್ಯಕೀಯ ರಜೆಯನ್ನು ಪಡೆದುಕೊಂಡಾಗ ಕಂಪನಿಯಿಂದ ನನಗೆ ಸಂಬಳ ಬಂದಿರುತ್ತದೆ. ಅ ನಂತರ ನನಗೆ ಕೆಲಸ ಮಾಡಲು ಅಗದ ಕಾರಣ ನಾನು ಸದರಿ ಕಂಪನಿಗೆ ರಾಜಿನಾಮೆ ಪತ್ರ ನೀಡಿದೆನು. ನನ್ನ ಸಂಬಳ ಬ್ಯಾಂಕ್ ಖಾತೆಗೆ ಬರುತ್ತಿತ್ತು. ನನ್ನ ಬ್ಯಾಂಕ್ ಖಾತೆ ಐಸಿಐಸಿಐ ಅವಿನ್ಯೂ ರಸ್ತೆ ಶಾಖೆಯಲ್ಲಿದೆ. ನನ್ನ ಬ್ಯಾಂಕ್ ಖಾತೆಯ ದಾಖಲೆಯನ್ನು ಹಾಜರು ಪಡಿಸಲು ತೊಂದರೆಯಿಲ್ಲ. ನಾನು ಮೇಲ್ ಮೂಲಕ ನನ್ನ ರಾಜಿನಾಮೆ ಪತ್ರವನ್ನು ಕಂಪನಿಗೆ ಕಳುಹಿಸಿರುತ್ತೇನೆ. ಕಂಪನಿಯವರು ನನ್ನ ರಾಜಿನಾಮೆ ಪತ್ರವನ್ನು ಒಪ್ಪಿ ಕೊಂಡು ನನ್ನನ್ನು

ಕಂಪನಿಯಿಂದ ಬಿಡುಗಡೆ ಮಾಡಿರುತ್ತಾರೆ. ನಾನು ನೀಡಿದ ರಾಜೀನಾಮೆ ಪತ್ರ ಹಾಗೂ ಅದನ್ನು ಕಂಪನಿಯವರು ಸ್ವೀಕರಿಸಿದ ಬಗ್ಗೆ ದಾಖಲೆ ಹಾಜರು ಪಡಿಸಲು ತೊಂದರೆಯಿಲ್ಲ. ನನಗೆ ಕೆಲಸ ಮಾಡಲು ಅಗುವುದಿಲ್ಲ ಎಂದು ವೈದ್ಯರ ಮೂಲಕ ಪ್ರಮಾಣ ಪತ್ರವನ್ನು ನೀಡಿರುವುದಿಲ್ಲ. ನನಗೆ ಕೆಲಸ ಮಾಡಲು ಅಗುವುದಿಲ್ಲ ಎಂದು ನಮ್ಮ ಕಂಪನಿಯವರು ನನ್ನನ್ನು ತೆಗೆದುಹಾಕಿರುವುದಿಲ್ಲ.

5. ಫೈಬರ್ ನೆಟ್ ವರ್ಕ್ ಬೆಂಗಳೂರಿನಲ್ಲಿ ಹೆಚ್ಚಿಗೆ ಇದೆಯೆಂದರೆ ಸರಿ. ಫೈಬರ್ ನೆಟ್ ವರ್ಕ್ ಕ್ಷೇತ್ರದಲ್ಲಿ ಅನುಭವ ಹೊಂದಿದ ವ್ಯಕ್ತಿಯನ್ನು ಹೆಚ್ಚಿನ ಸಂಬಳ ನೀಡಿ ಬೇರೆ ಕಂಪನಿಯವರು ಕೆಲಸಕ್ಕೆ ತೆಗೆದುಕೊಳ್ಳುತ್ತಾರೆಂದರೆ ಸರಿ. ನನ್ನ ಕಂಪನಿಯಿಂದ ನನಗೆ ಪುಲ್ ಅಂಡ್ ಫೈನಲ್ ಸೆಟಲ್ ಮೆಂಟ್ ಮೊತ್ತವನ್ನು ನೀಡಿರುವುದಿಲ್ಲ. ನನ್ನ ಕೆಲಸದ ಅನುಬವಕ್ಕೆ ಸಂಬಂದಿಸಿದಂತೆ ನಮ್ಮ ಕಂಪನಿಯಿಂದ ಯಾವುದೇ ಪ್ರಮಾಣ ಪತ್ರವನ್ನು ಪಡೆದುಕೊಂಡಿರುವುದಿಲ್ಲ. ನಾನು ಈಗಲೂ ಎಸಿಟಿ ಫೈಬರ್ ನೆಟ್ ಕಂಪನಿಯಲ್ಲಿಯೇ ಕೆಲಸ ಮಾಡುತ್ತಿದ್ದೇನೆಂದರೆ ಸರಿಯಲ್ಲ. ನಾನು ಸದರಿ ಕಂಪನಿಯಲ್ಲಿ ಕೆಲಸ ಮಾಡುತ್ತಿಲ್ಲ ಎಂದು ತೋರಿಸಲು ಅ ಕಂಪನಿಯ ಅದಿಕಾರಿಯವರನ್ನು ಸಾಕ್ಷಿ ಮಾಡಿಸಲು ತೊಂದರೆಯಿಲ್ಲ. ನಾನು ಹಿಂದೆ ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿ ರಾಜೀನಾಮೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಈಗಲೂ ಅದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು ಸಂಬಳವನ್ನು ಪಡೆದುಕೊಳ್ಳುತ್ತಿದ್ದೇನೆಂದರೆ ಸರಿಯಲ್ಲ. ಅಸ್ಪತ್ರೆಯಿಂದ ಬಿಡುಗಡೆಯಾದ ನಂತರ ನನಗೆ ಸಂಪೂರ್ಣ ಬೆಡ್ ರೆಸ್ಟ್ ಅವಶ್ಯಕತೆ ಇದೆಯೆಂದು ವೈದ್ಯರು ತಿಳಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

6. ಅಂತಿಮ ಬಿಲ್ಲಿನಲ್ಲಿ ನನಗೆ ಕಡೆಯಿಂದ ರೂ 1 ಲಕ್ಷ ಚಿಕಿತ್ಸೆಯ ವೆಚ್ಚ ಮರುಪಾವತಿಯಾಗಿರುತ್ತದೆ. ಚಿಕಿತ್ಸೆಯ ಎಲ್ಲಾ ಖರ್ಚು ವೆಚ್ಚಗಳನ್ನು ಸೇರಿಸಿ ಒಟ್ಟು ರೂ 79 ಸಾವಿರಕ್ಕೆ ಪ್ಯಾಕೆಜ್ ಬಿಲ್ಲು ಮಾಡಿರುತ್ತಾರೆಂದರೆ ಸರಿ. ನಾನು ಒಳರೋಗಿಯಾಗಿ ದಾಖಲಾಗಿದ್ದಾಗ ಅಂತಿಮ ಬಿಲ್ಲಿನಲ್ಲಿ ಔಷದಿಯ ವೆಚ್ಚಗಳು ಸಹ ಸೇರಿಕೊಂಡಿರುತ್ತದೆಂದರೆ ಸರಿಯಲ್ಲ. ದಿಃ 16.01.2020 ರಿಂದ 19.01.2020 ರವರೆಗಿನ ಔಷದಿಗಳನ್ನು ಖರೀದಿಸಿದ ವೆಚ್ಚವನ್ನು ಅಂತಿಮ ಬಿಲ್ಲಿನಲ್ಲಿ ಸೇರ್ಪಡೆಗೊಂಡಿರುತ್ತದೆಂದರೆ ಸರಿಯಲ್ಲ. ನಾನು ಮೊದಲಿನಂತೆ ಈಗಲೂ ಅರೋಗ್ಯವಂತನಾಗಿದ್ದೇನೆಂದರೆ ಸರಿಯಲ್ಲ. ನನಗೆ ಅಪಘಾತದಿಂದ ಯಾವುದೇ ರೀತಿಯ ತೊಂದರೆಗಳು ಅಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈಗಲೂ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಕಾರಣ ನನ್ನ ಮುಖ್ಯ ವಿಚಾರಣೆಯ ಪ್ಯಾರಾ 6 ರಲ್ಲಿ ತಿಳಿಸಿರುವ ವಿಚಾರ ಸುಳ್ಳಾಗಿದೆಯೆಂದರೆ ಸರಿಯಲ್ಲ. ನನ್ನ

ಉದ್ಯೋಗಕ್ಕೆ ಸಂಬಂದಿಸಿದ ದಾಖಲೆಯನ್ನು ಸತ್ಯಾಂಶ ಹೊರಬರುತ್ತದೆಂದು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿ ನಿಂದಲ್ೕ ಅಗಿರುತ್ತದೆಂದರೆ ಸರಿಯಲ್ಲ. ಪೋಲೀಸರೊಂದಿಗೆ ಶಾಮೀಲಾಗಿ 2 ನೇ ಎದುರುದಾರರ ಕಾರು ಚಾಲಕರ ವಿರುದ್ದ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

2 ನೇ ಎದುರುದಾರರು ಏಕಪಕ್ಷಿಯವಾಗಿರುತ್ತಾರೆ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ

(ವಾಣಿ ಎ. ಶೆಟ್ಟಿ)
17 ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ ಸದಸ್ಯರು